# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.347/2015

| | | | |
|---|---|---|---|
| ಚಾಸಾ | **15** | ಪ್ರಾಸಾ | **3** |
| ಹೆಸರು | | ಸಿ ಸಂಪತ್ ಕುಮಾರ್ | |
| ತಂದೆಯ ಹೆಸರು | | ಲೇಟ್ ಚಿಕ್ಕಪ್ಪಯ್ಯ | |
| ವಯಸ್ಸು | | **67**ವರ್ಷಗಳು | |
| ಉದ್ಯೋಗ | | ನಿವೃತ್ತ ಎಸಿಪಿ | |
| ವಿಳಾಸ | | ರಾಮನಗರ | |

ದಿನಾಂಕ**.15.12.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು**.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ದಿನಾಂಕ**.26.10.2013** ರಿಂದ **07.05.2015** ರವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ**.**

ದಿ:**04.03.2015** ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ**-14** ರವರಿಂದ ಪಡೆದುಕೊಂಡು ಪರಿಶೀಲಿಸಿ ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ.

ಆದೇ ದಿನ ಅಪಘಾತ ಪಡಿಸಿದ ಬಸ್ಸಿ ನ ಚಾಲಕನ ಬಗ್ಗೆ ಮಾಹಿತಿ ಮತ್ತು ಆತನಿಗೆ ಸಂಬಂಧಿಸಿದಂತೆ ಕರ್ತವ್ಯ ದೃಢೀಕರಣ ಪತ್ರ ಕೊಡುವಂತೆ ಚಾಸಾ**-11** ರವರಿಗೆ ನಿವೇದಿಸಿಕೊಂಡಿರುತ್ತೇನೆ. ಆದರಂತೆ ಆದೇ ದಿನ ಚಾಸಾ**-11** ರವರು ಚಾಲಕನಿಗೆ ಸಂಬಂಧಿಸಿದಂತೆ ಕರ್ತವ್ಯ ದೃಡೀಕರಣ ಪತ್ರ ಕೊಟ್ಟ ಮೇರೆಗೆ ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆದೇ ದಿನ ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ**-42-**ಎಫ್**-078** ಸಂಬಂಧಿಸಿದಂತೆ ಐಎಂವಿ ವರದಿಯನ್ನು ನೀಡುವಂತೆ ಕೋರಿ ಚಾಸಾ**-12** ರವರಿಗೆ ನಿವೇದಿಸಿಕೊಂಡಿರುತ್ತೇನೆ. ಆದೇ ದಿನ ಅಪಘಾತ ಪಡಿಸಿದ ವಾಹನದ ಚಾಲಕನಾದ ಮೊಹಿದ್ದೀನ್ ಬಾಷ ರವರು ನನ್ನ ಸಮಕ್ಷಮ ತಾವಾಗಿಯೇ ಹಾಜರಾದ ಮೇರೆಗೆ ಆತನನ್ನು ವಿಚಾರಿಸಿ ದಸ್ತಗಿರಿ ಕ್ರಮಕೈಗೊಂಡು ಸೂಕ್ತ ಜಾಮೀನಿನ ಮೇಲೆ ಆರೋಪಿಯನ್ನು ಬಿಡುಗಡೆ ಮಾಡಿರುತ್ತೇನೆ. ಆದೇ ದಿನ ಚಾಸಾ**-1** ರವರ ಮುಂದುವರೆದ ಹೇಳಿಕೆಯನ್ನು ಮತ್ತು ಸಾಕ್ಷಿದಾರರಾದ ಚಾಸಾ**-2** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ. **05.03.2015**ರಂದು ಅಪಘಾತ ಪಡಿಸಿದ ವಾಹನದ ಮಾಲೀಕರಾದ ಚಾಸಾ**-11** ರವರಿಂದ ನಷ್ಟಭರ್ತಿ ಪತ್ರ ಬರೆಸಿಕೊಂಡು ಅವರ ತಬಾಕ್ಕೆ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ.18.03.2015ರಂದು ಮೃತನಿಗೆ ಸಂಬಂಧಿಸಿದಂತೆ ಪಿಎಂ ವರದಿಯನ್ನು ಚಾಸಾ-13 ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಆದೇ ದಿನ ಚಾಸಾ-12 ರವರಿಂದ ವಾಹನಕ್ಕೆ ಸಂಬಂಧಿಸಿದಂತೆ ಐಎಂವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ.

ಸಾಕ್ಷಿಯು ಆರೋಪಿಗೆ ಸಂಬಂಧಿಸಿದಂತೆ ಚಾಸಾ-11 ರವರಿಂದ ಪಡೆದುಕೊಂಡ ಕರ್ತವ್ಯ ದೃಢೀಕರಣ ಪತ್ರವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಕರ್ತವ್ಯ ದೃಢೀಕರಣ ಪತ್ರವನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ನಷ್ಟಭರ್ತಿ ಪತ್ರವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ನಷ್ಟಭರ್ತಿ ಪತ್ರವನ್ನು ನಿಪಿ-8ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಪಿಎಂ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಪಿಎಂ ವರದಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಐಎಂವಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಐಎಂವಿ ವರದಿಯನ್ನು ಈಗಾಗಲೇ ನಿಪಿ-**6** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**6(**ಎ**)** ಎಂದು ಗುರುತಿಸಲಾಯಿತು.

ನಂತರ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಅಪರಾಧ ಸಾಬೀತಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನನ್ನ ಸಮಕ್ಷಮ ಹಾಜರಾಗಿ ನನ್ನಿಂದ ಜಾಮೀನು ಪಡೆದುಕೊಂಡ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-</u>

ಆರೋಪಿಯ ತಪ್ಪಿ ನಿಂದಲ್ಲೆ ಸದರಿ ಅಪಘಾತವಾಗಿಲ್ಲ ಎಂಬ ಸಂಗತಿಯು ನಾನು ತನಿಖೆ ಮಾಡುವ ಕಾಲಕ್ಕೆ ಸಾಬೀತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾಗುವ ಸಮಯದಲ್ಲಿ ಅಪಘಾತ ಪಡಿಸಿದ ವಾಹನ ಎಷ್ಟು ಕೀ.ಮಿ ವೇಗವಾಗಿ ಚಲಿಸುತ್ತಿತ್ತು ಎಂಬ ಬಗ್ಗೆ ನೀವು ಪಡೆದುಕೊಂಡಂತಹ ಹೇಳಿಕೆಯಲ್ಲಿ ಆಗಲೀ ಇತರೆ ದಾಖಲೆಗಳಲ್ಲಿ ಆಗಲೀ ನಮೂದಿಸಿಲ್ಲ ಎಂದರೆ ಸರಿ. ಅಪಘಾತ ಕ್ಕೆ ಸಂಬಂಧಿಸಿದಂತೆ ಚಾಸಾ-**1** ಮತ್ತು ಚಾಸಾ-**2**

ರವರಿಂದ ನಾನು ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ಬಸ್ಸಿ ನಲ್ಲಿ ಯಾರು ಯಾರು ಪ್ರಯಾಣ ಮಾಡುತ್ತಿದ್ದರು ಅವರ ಹೇಳಿಕೆಗಳನ್ನು ನಾನು ಪಡೆದುಕೊಂಡಿಲ್ಲ ಎಂದರೆ ಸರಿ. ನಿಪಿ-**5** ರಿಂದ **8** ರಂತೆ ಇರುವ ದಾಖಲೆಗಳನ್ನು ನಾನು ಈ ಪ್ರಕರಣಕೋಸ್ಕರವೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂಬ ಸಂಗತಿಯು ತನಿಖಾ ಕಾಲದಲ್ಲಿ ಸಾಬೀತಾಗಿದ್ದರು ಮೃತರ ಕುಟುಂಬಕ್ಕೆ ನಾನು ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಆರೋಪಿಯ ತಪ್ಪಿನಿಂದ ಅಪಘಾತವಾಗದೇ ಇದ್ದರು ಆತನ ವಿರುದ್ದ ಈ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**